ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ ..... 05 .....

..... ಕಡತದ ಸಂಖ್ಯೆ ..... 36/19-20 .....

15/10/19

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

1)

ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪುರ ವಿಭಾಗ ರವರಿಗೆ ಮಂಡಿಸಿದೆ.

ವಿಷಯ: Improvements to Roads and drains and construction of culverts at Saraipalya colony and other area in ward o 06, Byatrayanpura Sub division ನ ಕಾಮಗಾರಿ ಅಂದಾಜನ್ನು ಅನುಮೋದನೆಗೆ ಸಲ್ಲಿಸುವ ಬಗ್ಗೆ.

ಕಾಮಗಾರಿ ಸಂಕೇತ : 006-20-000163

* * * * *

ಬೃಹತ ಬೆಂಗಳೂರು ಮಹಾನಗರ ಪಾಲಿಕೆ, ಬ್ಯಾಟರಾಯನಪುರ ಉಪವಿಭಾದ, ವಾರ್ಡ್ ನಂ.06 (ಥಣಿಸಂದ್ರ)ದ ವ್ಯಾಪ್ತಿಯಲ್ಲಿ ಬಿ.ಬಿ.ಎಂ.ಪಿ ಆಯವ್ಯಯದ 2019-20 ನೇ ಸಾಲಿನ ಶೇ 24.10% ಎಸ್.ಸಿ/ಎಸ್.ಟಿ ಕಲ್ಯಾಣ ಯೋಜನೆಗಳಡಿ ಪ.ಜಾ/ಪ.ಪಂ ಸಮುದಾಯದ ಜನರು ವಾಸಿಸುವ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಲೆಕ್ಕ ಶೀರ್ಷಿಕೆ ಪಿ-1878 ರ ಅಡಿಯಲ್ಲಿ ರೂ 100.00 ಲಕ್ಷಗಳಿಗೆ Improvements to Roads and drains and construction of culverts at Saraipalya colony and other area in ward o 06, Byatrayanpura Sub division ಕಾಮಗಾರಿಯು ಮಂಜುರಾಗಿದ್ದು, ಸದರಿ ಕಾಮಗಾರಿಗೆ ಜಾಬ್ ಸಂಖ್ಯೆ 006-20-00163 ರಲ್ಲಿ ಕಾಮಗಾರಿ ಸಂಕೇತ ಸಹ ದೊರಕಿರುತ್ತದೆ.

ಅದರಂತೆ ಸರಾಯಿಪಾಳ್ಯ ಕಾಲೋನಿಯಲ್ಲಿ ಇತ್ತೀಚಿಗೆ ಬಿ.ಡಬ್ಲ್ಯೂ.ಬಿ.ಎಸ್.ಎಸ್.ಬಿ ವತಿಯಿಂದ ಕಾವೇರಿ ಕುಡಿಯುವ ನೀರು ಮತ್ತು ಒಳಚರಂಡಿ ಪೈಪುಗಳನ್ನು ಅಳವಡಿಸಲು ರಸ್ತೆಗಳನ್ನು ಅಗೆದಿದ್ದು, ಸದರಿ ಕಾಲೋನಿಯ ಎಲ್ಲಾ ರಸ್ತೆಗಳು ಸಂಪೂರ್ಣವಾಗಿ ಹಾಳಗಿದ್ದು, ಸದರಿ ಕಾಲೀನಿಯಲ್ಲಿ ಸಮರ್ಪಕವಾದ ಚರಂಡಿಗಳು ಇರುವುದಿಲ್ಲ. ಅದರಂತೆ ಸ್ಥಳ ಪರಿಶೀಲನೆ ಮಾಡಿ ಈ ಕೆಳಕಂಡಂತೆ ಅಂದಾಜನ್ನು ಪಟ್ಟಿಯನ್ನು ಸ್ಥಳದ ಅವಶ್ಯಕತೆಗೆ ಅನುಗುಣವಾಗಿ ತಯಾರಿಸಲಾಗಿದೆ.

2)

1. ಸಿಮೆಂಟ್ ಕಾಂಕ್ರೀಟ್ ಚರಂಡಿ ಮತ್ತು ಅಡಿಗಾಲುವೆ ನಿರ್ಮಿಸಲು ಮಣ್ಣು ಅಗೆತದ ಕೆಲಸ ಮಾಡುವುದು.
2. ಚರಂಡಿ ಮತ್ತು ಅಡಿಗಾಲುವೆಗೆ ಸಿಮೆಂಟ್ ಕಾಂಕ್ರಿಟ್ (1:5:10) ಮಿಶ್ರಣ ಬೆಡ್ ಹಾಕುವುದು.
3. ಅಡಿಗಾಲುವೆಗಳನ್ನು ಗ್ರಾನೈಟ್ ಸೈಜು ಕಲ್ಲು ಕಟ್ಟಡದಲ್ಲಿ ನಿರ್ಮಿಸುವುದು.
4. ಚರಂಡಿಗಳನ್ನು ಉಕ್ಕು ಮತ್ತು ಎಂ20 ಸಿಮೆಂಟ್ ಕಾಂಕ್ರೀಟ್‌ನಿಂದ ನಿರ್ಮಿಸುವುದು.
5. ಚರಂಡಿ ಹಾಗೂ ಅಡಿಗಾಲುವೆಗೆ ಆರ್.ಸಿ.ಸಿ ಎಂ20 ಕಾಂಕ್ರಿಟ್ ನಿಂದ ಪ್ರಿಕ್ಯಸ್ಟ್ ಕವರಂಗ್ ಮತ್ತು ಡಕ್ ಸ್ಲಾಬ್ ಅಳವಡಿವುದು ಹಾಗೂ ಇತರೆ ಅವಶ್ಯಕ ಅಂಶಗಳಿಗೆ ಅಂದಾಜಿನಲ್ಲಿ ಅವಕಾಶ ಕಲ್ಪಿಸಿಕೊಂಡಿರುತ್ತದೆ.
6. ಕಾಂಕ್ರೀಟ ರಸ್ತೆಗಳಿಗಾಗಿ ಎಂ 30 ಸಿಮೆಂಟ್ ಕಾಂಕ್ರೀಟ್ ಅಳವಡಿಸುವುದು.
7. ಕೊಳವೆ ಬಾವಿಗಳಿಂದ ಸರಬರಾಜು ಆಗುತ್ತಿರುವ ಕುಡಿಯುವ ನೀರಿನ ಪೈಪುಗಳು ಹಾಳಾದ ಕಾರಣ ಹೊಸದಾಗಿ ಪೈಪುಗಳನ್ನು ಅಳವಡಿಸುವುದು ಇತ್ಯಾದಿ.

ಪು.ತಿ.ನೋ

ವಿಷಯ

ಪುಟದ ಸಂಖ್ಯೆ ..06.....

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
3)	ಅಂದಾಜನ್ನು 2018–19ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿಯನ್ನು ಅಳವಡಿಸಿಕೊಂಡು ರೂ. 100.00 ಲಕ್ಷಗಳಿಗೆ ತಯಾರಿಸಿದ್ದು, ಸದರಿ 2019–20 ನೇ ಸಾಲಿನ ಶೇ 24.10% ಎಸ್.ಸಿ/ಎಸ್.ಟಿ ಕಲ್ಯಾಣ ಯೋಜನೆ ಲೆಕ್ಕ ಶೀರ್ಷಿಕೆ ಪಿ–1878 ರ ಅಡಿಯಲ್ಲಿ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿಯನ್ನು ನೀಡಲು ಕೋರಲಾಗಿದೆ ಹಾಗೂ ಸದರಿ ಕಾಮಗಾರಿ ತುರ್ತಾಗಿ ಕೈಗೊಳ್ಳಬೇಕಾಗಿರುವದರಿಂದ ಮೇ//. ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ನಿರ್ವಹಿಸಲು ಅನುಮೋದನೆ ಕೋರಲಾಗಿದೆ. 18/10/2019 ಸಹಾಯಕ ಅಭಿಯಂತರರು ವಾರ್ಡ್ ನಂ. 06 ಸಹಾಯಕ ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪುರ ಉಪವಿಭಾಗ ಬಿ.ಬಿ.ಎಂ.ಪಿ., ಬೆಂಗಳೂರು-26
4)	ಕಾ.ಪಾ.ಅ.(ಬ್ಯಾ.ವಿ)., ಹಿಂದಿನ ಕಂಡಿಕೆಗಳನ್ನು ತಮ್ಮ ಅವಗಾಹನೆಗೆ ತರುತ್ತಾ, 2019–20 ನೇ ಸಾಲಿನ ಬಿ.ಬಿ.ಎಂ.ಪಿ ಆಯವ್ಯಯದ ಶೇ.24.10% ಎಸ್.ಸಿ/ಎಸ್.ಟಿ ಕಲ್ಯಾಣ ಯೋಜನೆಗಳ ಅಡಿ ಪ.ಜಾ/ಪ.ಪಂ ಸಮುದಾಯದ ಜನರು ವಾಸಿಸುವ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಲೆಕ್ಕಶೀರ್ಷಿಕೆ ಪಿ–1878 ರ ಅಡಿಯಲ್ಲಿ ರೂ.100.00 ಲಕ್ಷಗಳಲ್ಲಿ Improvements to Roads and drains and construction of culverts at SaraiPalya Colony & Other area in Ward No.06 in Byatarayanpura Sub Division ಕಾಮಗಾರಿಯು ಮಂಜೂರಾಗಿದ್ದು, ಸದರಿ ಕಾಮಗಾರಿಗೆ ಕಾಮಗಾರಿ ಸಂಕೇತ: 006–20–000163 ರಲ್ಲಿ ಕಾಮಗಾರಿ ಸಂಕೇತ ಸಹ ದೊರೆಕಿರುತ್ತದೆ. (ಸದರಿ ಕಾಮಗಾರಿಯನ್ನು ಕೈಗೊಳ್ಳುವ ಪ್ರದೇಶವು ಶೇ.50 ಕ್ಕಿಂತ ಹೆಚ್ಚಿಗೆ ಪ.ಜಾ/ಪ.ಪಂ ದವರು ವಾಸಿಸುತ್ತಿರುವ ಬಗ್ಗೆ ಸಹಾಯಕ ಕಂದಾಯ ಅಧಿಕಾರಿ, ಬ್ಯಾಟರಾಯನಪುರ ಉಪವಿಭಾಗ ರವರಿಂದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ಉಪವಿಭಾಗ ರವರು ಅನುಮೋದನೆ ಪಡೆಯಲಾಗಿದ್ದು, ಪ್ರತಿಯನ್ನು ಕಡತದಲ್ಲಿ ಲಗತ್ತಿಸಿದೆ). ಮುಂದುವರೆದು ಸದರಿ ಕಾಮಗಾರಿಯ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಮೇ।। ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ಕಾಮಗಾರಿಯನ್ನು ನಿರ್ವಹಿಸಲ್ಲು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಕೋರುತ್ತಾ ಕಡತವನ್ನು ಸಮುಚಿತ ಮಾರ್ಗದಲ್ಲಿ ಮಂಡಿಸಿದೆ. 23/10 ಕಾರ್ಯಪಾಲಕ ಅಭಿಯಂತರರು (ಬ್ಯಾ.ವಿ)
5)	ಮುಖ್ಯ ಅಭಿಯಂತರರ ಕಛೇರಿ 23 OCT 2019 883 ಬಿ.ಬಿ.ಎಂ.ಪಿ,ಯಲಹಂಕ ವಲಯ. ಮುಖ್ಯ ಅಭಿಯಂತರರು (ಯ.ವ) ಅನುಮತಿ ನೀಡಲಾಗಿದೆ ಮುಖ್ಯ ಅಭಿಯಂತರರು ಯಲಹಂಕ ವಲಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪುರ ಉಪವಿಭಾಗ ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ..Improvements to Roads & drains in ward no-06 ಪುಟದ ಸಂಖ್ಯೆ ..07.....
ಕಡತದ ಸಂಖ್ಯೆ EE/BY/ES574/19-20

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ:-

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಯಲಹಂಕ ವಲಯಕ್ಕೆ ಸೇರಿರುವ ವಾರ್ಡ್ ನಂ:06 ಕ್ಕೆ 2019-20ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ ಪಿ-1878 (Bhagyajyothi Sooru / Neeru Yojane and General) ರ ಅಡಿ ಪ್ರಸ್ತಾಪಿತ ಕಾಮಗಾರಿಗಳ ಜಾಬ್ ಕೋಡ್ ಪಡೆದಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ.

SL No	Name of work	Job Code No	Est Cost (Rs. in Lakhs)
1	Improvements to roads and drains and construction of culverts at Saraipalya colony and other area in ward no.6 Byatarayanapura sub division	006-20-000163	100.00
2	Improvements to roads and drains and construction of culverts at Mariyannapalya colony and other area in ward no.6 Byatarayanapura sub division	006-20-000164	100.00

ಈ ಮೇಲ್ಕಾಣಿಸಿದ ಕಾಮಗಾರಿಗಳನ್ನು ಪಾಲಿಕೆಯ ಸದಸ್ಯರಾದ ಶ್ರೀಮತಿ.ಮಮತ.ಕೆ.ಎಂ ರವರು ಮತ್ತು ಮುಖ್ಯ ಅಭಿಯಂತರರು (ಯಲಹಂಕ ವಲಯ) ರವರು ಪ್ರಸ್ಥಾಪಿತ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖಾಂತರ ನಿರ್ವಹಿಸಲು ಕಂಡಿಕೆ (06) ರಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ (ಸಂಗ್ರಹಣ ಕೋಶ) ಆದೇಶ ಸಂಖ್ಯೆ:ಆಇ/541/ವೆಚ್ಚ-12/2019, ದಿನಾಂಕ:29/05/2019 ರಲ್ಲಿ ಸರ್ಕಾರದ ಇಲಾಖೆಗಳು ಮತ್ತು ಇತರೆ ಸಂಗ್ರಹಣಾ ಸಂಸ್ಥೆಗಳು ಕರ್ನಾಟಕ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಕೆ.ಆರ್.ಐ.ಡಿ.ಎಲ್) ಸಂಸ್ಥೆಯ ಮೂಲಕ ಗರಿಷ್ಟ ರೂ.2.00 ಕೋಟಿಗಳ ಮಿತಿಯಲ್ಲಿ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ 2019-20ನೇ ಸಾಲಿಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ. ಈ ವಿಚಾರದಲ್ಲಿ ಮಾನ್ಯ ಆಯುಕ್ತರು ರವರ ಕಛೇರಿ ಟಿಪ್ಪಣಿ ಸಂಖ್ಯೆ:673/2019-20, ದಿನಾಂಕ:10/06/2019 ರಂತೆ ಪಾಲಿಕೆಯ ವತಿಯಿಂದ 2019-20ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ನಿಗಧಿ ಪಡಿಸಿದ ಅನುದಾನದ ಕಾಮಗಾರಿಗಳನ್ನು (ರಾಜ್ಯ ಹಣಕಾಸು ಆಯೋಗದ ಅನುದಾನ, 14ನೇ ಹಣಕಾಸು ಆಯೋಗದ ಅನುದಾನ, ಸ್ವಚ್ ಭಾರತ್ ಮತ್ತು ಘನ ಸರ್ಕಾರದ ಅನುಮೋದಿತ ಕಾಮಗಾರಿಗಳನ್ನು ಹೊರತುಪಡಿಸಿ) ಸಂಬಂಧಪಟ್ಟ ಸ್ಥಾಯಿ ಸಮಿತಿ ಅನುಮೋದನೆ ಪಡೆದು ತದನಂತರ ಸರ್ಕಾರದ ಆರ್ಥಿಕ ಇಲಾಖೆಯವರು ನೀಡಿರುವ ಷರತ್ತುಗಳಿಗೆ ನಿಯಮಾನುಸಾರವಾಗಿ ಕ್ರಮವಹಿಸಿ ಮೆ॥ಕೆ.ಆರ್.ಐ.ಡಿ.ಎಲ್ ಮುಖಾಂತರ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ:ನಅಇ/497/ಎಂ.ಎನ್.ವೈ2016(ಭಾಗ-1), ದಿನಾಂಕ:07/07/2017 ರ ಆದೇಶದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ವತಿಯಿಂದ Performance Security ಪಡೆಯಲು ಸರ್ಕಾರದ ಆದೇಶ ಸಂಖ್ಯೆ:FD/4/PCL/2008, ದಿನಾಂಕ:14/10/2008 ರಂತೆ ಕ್ರಮ ತೆಗೆದುಕೊಳ್ಳಲು ಆದೇಶ ನೀಡಿರುವ ಮೇರೆಗೆ ಮತ್ತು ಈ ವಿಚಾರದಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿ ಸಂಖ್ಯೆ:6282/2018-19, ದಿನಾಂಕ:16/01/2019 ರಲ್ಲಿ ಕಾಮಗಾರಿಗಳಿಗೆ ಕರಾರು ಪತ್ರದಲ್ಲಿ ಅಳವಡಿಸಿಕೊಳ್ಳಲು ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿರುತ್ತದೆ.

ಪು.ತಿ.ನೋ

ವಿಷಯ W NO - 06

ಪುಟದ ಸಂಖ್ಯೆ ..... (8)

ಕಡತದ ಸಂಖ್ಯೆ ELC/PR/5534/19-20

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಈ ಹಿನ್ನಲೆಯಲ್ಲಿ, ವಾರ್ಡ್ ನಂ:06 ರಲ್ಲಿ ಮೇಲ್ಕಾಣಿಸಿದ ಕಾಮಗಾರಿಗಳು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ಶೇ.50ಕ್ಕಿಂತ ಹೆಚ್ಚು ವಾಸವಾಗಿರುವ ಬಗ್ಗೆ ಸಹಾಯಕ ಕಂದಾಯ ಅಧಿಕಾರಿ (ಬ್ಯಾಟರಾಯನಪುರ ಉಪ-ವಿಭಾಗ) ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ ಉಪ-ವಿಭಾಗ) ರವರು ಧೃಢೀಕರಿಸಿದ್ದು, ಸದರಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಅನುಷ್ಠಾನಗೊಳಿಸಲು ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆರವರಿಗೆ ವಹಿಸಿಕೊಡಲು ಸೂಕ್ತ ನಿರ್ಣಯ ಕೋರಿ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಗೆ ಟಿಪ್ಪಣಿಯೊಂದಿಗೆ ಮಂಡಿಸಲು ಮಾನ್ಯ ಆಯುಕ್ತರು ರವರ ಸೂಕ್ತ ಆದೇಶ ಕೋರಿದೆ.

24/10

ಪ್ರಧಾನ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಅಭಿಯಂತರರು (ಯಲಹಂಕ ವಲಯ)

ಬೃ.ಬೆ.ಮ.ಪಾ.
ಸ್ವೀಕೃತಿ ದಿನಾಂಕ 22/10/19
ಸಂ: 6241

ಪ್ರಸ್ತಾವನೆ ಆಯುಕ್ತರಿಗೆ ಪಿ.ಆ(ಯೋ)/ಪಿ.ಆರ್/6241/2019-20

ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ ವಿಭಾಗ) ಹಾಗೂ ಮುಖ್ಯ ಅಭಿಯಂತರರು (ಯಲಹಂಕ ವಲಯ) ರವರು ವಾರ್ಡ್ ಸಂಖ್ಯೆ:06 ರ ವ್ಯಾಪ್ತಿಯ ಕಂಡಿಕೆ-09 ರಲ್ಲಿ ಪ್ರಸ್ತಾಪಿಸಿರುವ (02) ಕಾಮಗಾರಿಗಳನ್ನು **ಕೈಗೊಳ್ಳಲು 2019-20ನೇ ಸಾಲಿನ ಲೆಕ್ಕಶೀರ್ಷಿಕೆ ಪಿ-1878 ಅಡಿಯಲ್ಲಿ ಸಂಖ್ಯೆ:006-20-000183 ಮತ್ತು 006-20-000184 ರ** ಕಾಮಗಾರಿ ಸಂಕೇತ ಪಡೆದುಕೊಂಡಿದ್ದು, **ಸದರಿ ಕಾಮಗಾರಿಗಳನ್ನು ಮೆ:ಕೆ.ಆರ್.ಐ.ಡಿ.ಎಲ್ ಸಂಸ್ಥೆಯಿಂದ ನಿರ್ವಹಿಸಲು** ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಗೆ ಟಿಪ್ಪಣಿ ಮಂಡಿಸಲು ಪ್ರಸ್ತಾವನೆ ಮಂಡಿಸಿದ್ದು, ಪ್ರಧಾನ ಅಭಿಯಂತರರು ಶಿಫಾರಸ್ಸು ಮಾಡಿರುತ್ತಾರೆ.

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ 541 ವೆಚ್ಚ-12/2019, ದಿನಾಂಕ: 29-05-2019 ರಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಬಳಾಯಿಸಿ 2019-20ನೇ ಸಾಲಿಗೆ ಕೆಲವೊಂದು ಷರತ್ತುಗೊಳಪಟ್ಟು ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಲಾಗಿರುತ್ತದೆ. ಈ ವೈಕಿ ಷರತ್ತು ಸಂಖ್ಯೆ: (2) ರಲ್ಲಿ "**ಈ ಅಧಿಸೂಚನೆಯ ಅವಧಿಯು ಮುಕ್ತಾಯಗೊಳ್ಳುವುದರೊಳಗಾಗಿ, KHB ಮಾದಲಿಯಲ್ಲಿಯೇ KRIDL ಸಂಸ್ಥೆಯು ಕೆ.ಟಿ.ಪಿ.ಪಿ. ಕಾಯ್ದೆ ಮತ್ತು ನಿಯಮಗಳನ್ವಯವೇ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ಸೂಕ್ತ ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದು**" ಎಂದು ಸೂಚಿಸಿರುತ್ತಾರೆ.

ಮುಂದುವರೆದು, ಮಾನ್ಯ ಆಯುಕ್ತರ ದಿನಾಂಕ:10-06-2019 ರ ಆಂತರಿಕ ಕಛೇರಿ ಟಿಪ್ಪಣಿಯಲ್ಲಿ ಪಾಲಿಕೆಯ 2019-20ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ನಿಗಧಿಪಡಿಸಿದ ಅನುದಾನದ ಕಾಮಗಾರಿಗಳನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿ ಅನುಮೋದನೆ ಪಡೆದು, ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ 541 ವೆಚ್ಚ-12/2019, ದಿನಾಂಕ:29-05-2019 ರಲ್ಲಿನ ಷರತ್ತಿನಂತೆ ನಿಯಮಾನುಸಾರ ಕ್ರಮವಹಿಸಿ ಮೆ:ಕೆ.ಆರ್.ಐ.ಡಿ.ಎಲ್ ಮುಖಾಂತರ ಅನುಷ್ಠಾನಗೊಳಿಸಲು ಆದೇಶಿಸಲಾಗಿರುತ್ತದೆ.

ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ:ನಇ/497/ಎಂ.ಎನ್.ವೈ2016(ಭಾಗ-1), ದಿನಾಂಕ:07-07-2017 ರ ಆದೇಶದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ವತಿಯಿಂದ Performance Security ಪಡೆಯಲು ಸರ್ಕಾರದ ಆದೇಶ ಸಂಖ್ಯೆ:FD/4/PCL/2008, Dated:14-10-2008 ರಂತೆ ಕ್ರಮ ತೆಗೆದುಕೊಳ್ಳಲು ಆದೇಶ ನೀಡಿರುವ ಮೇರೆಗೆ ಮತ್ತು ಈ ವಿಚಾರದಲ್ಲಿ ಈ ಕಛೇರಿ ಟಿಪ್ಪಣಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ಬ್ಲಾ-06 ಪುಟದ ಸಂಖ್ಯೆ 9

KRIDL & A-S ಕಡತದ ಸಂಖ್ಯೆ SC(P)/PR/6241/19-20

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಸಂಖ್ಯೆ:6282/2018-19, ದಿನಾಂಕ:16-01-2019ರಲ್ಲಿ ಕಾಮಗಾರಿಗಳಿಗೆ ಕರಾರು ಪತ್ರದಲ್ಲಿ ಅಳವಡಿಸಿಕೊಳ್ಳಲು ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿರುತ್ತದೆ.

(16) ಮೇಲ್ಕಂಡ ಅಂಶಗಳನ್ನು ತಮ್ಮ ಆದ್ಯ ಗಮನಕ್ಕೆ ತರುತ್ತಾ, ಮುಖ್ಯ ಅಭಿಯಂತರರು (ಯಲಹಂಕ ವಲಯ) ಮತ್ತು ಪ್ರಧಾನ ಅಭಿಯಂತರರು ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿರುತ್ತಾರೆ;

1. ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ 541 ವೆಚ್ಚ-12/2019, ದಿನಾಂಕ: 29-05-2019 ರಲ್ಲಿನ ಷರತ್ತುಗಳಿಗೊಳಪಟ್ಟು ಸದರಿ ಎರಡು ಕಾಮಗಾರಿಯನ್ನು ಮೆ:ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ವತಿಯಿಂದ ನಿರ್ವಹಿಸಲು **ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿಯನ್ನು ಮಂಡಿಸುವ ಬಗ್ಗೆ ಸೂಕ್ತ ನಿರ್ದೇಶನ.**
2. ಸದರಿ ಎರಡು ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿದ್ದು, ಅಧಿಕಾರ ಪ್ರತ್ಯಾಯೋಜನೆ ನಡವಳಿಯಂತೆ **ಆಡಳಿತಾತ್ಮಕ ಅನುಮೋದನೆ ನೀಡುವ ಅಧಿಕಾರವು ಮಾನ್ಯರಾಗಿದ್ದು, ಅನುಮೋದನೆ.**

(17) ಮಾನ್ಯ ಆಯುಕ್ತರು)

ಆ. ಅನುಮೋದನೆ ಅಂಗೀಕಾರ

ಸಹಿ/- ಅನುಮೋದನೆ

7/11/2019

Special Commissioner (Project)
Bruhat Bangalore Mahanagara Palike

Commissioner
Bruhat Bengaluru Mahanagara Palike

ಬಿ.ಬಿ.ಎಂ.ಪಿ. ಆಯುಕ್ತರ ಅಪ್ತ ಕಾರ್ಯಾಲಯ
ಸಂಖ್ಯೆ ಬಿ.ಎಸ್.ಆರ್. Fi 5296
ದಿನಾಂಕ 06.11.19

Spl. Comm (P)

ಬಿ.ಬಿ.ಎಂ.ಪಿ. ಆಯುಕ್ತರ
ಸಂಖ್ಯೆ 6604
ದಿನಾಂಕ 11/11/19
(ಯೋಜನೆ)

Special Commissioner (Project)
Bruhat Bangalore Mahanagara Palike

Submitted :- C/Secretary for further
n Lachm

ಪ್ರಧಾನ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕೌನ್ಸಿಲ್ ಕಾರ್ಯದರ್ಶಿ ಕಛೇರಿ
ಪತ್ರ ಸಂಖ್ಯೆ 1317
ದಿನಾಂಕ 13.11.19

13/11/19

16/11/19

ಪು.ತಿ.ನೋ

ವಿಷಯ ವಾರ್ಡ್ - 06

ಪುಟದ ಸಂಖ್ಯೆ ..... 10 .....

ಕಡತದ ಸಂಖ್ಯೆ RR/[illegible]/19-20

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಂಡಿಕೆ 17ರ ಮೇರೆಗೆ ಅಯುಕ್ತರ ಆದೇಶದಂತೆ

22) ವಾರ್ಡ್ ಮಟ್ಟದ ಕಾರ್ಯಜನಕ ಕಾಮಗಾರಿ ಸ್ಥಾಯಿ ಸಮಿತಿಗೆ ಕಡತವನ್ನು ಕಳುಹಿಸಲು ಆದೇಶ ಹೊರಡಿಸಿದೆ. 16.11.19

23) ಪೂರಕಸ್ಥಾಪಕರು

ಕಂಡಿಕೆ 22 ಕ್ಕೆ ಅನುಸರಣೆಗಾಗಿ.

24) 6/11 ಕಂಡಿಕೆ 22ಕ್ಕೆ ಒಪ್ಪಿಗೆಯಿದೆ, ಬಾ.ಬು.ಸಾ. ಶಿ. ಸ್ಥಾಯಿ ಸಮಿತಿಗೆ ಕಡತ ಕಳುಹಿಸಲು ಪ್ರಸ್ತಾಪ ಸೂಚಿಸಿದೆ.

18/11/19

25) ಶಿ.ಶಿಯವರಿಗೆ

20/11/19

26) ಬಾ.ಕಾ.ಸ್ಥಾ.ಸಿ/333/19-20

ವಾರ್ಡ್‌ಮಟ್ಟದ ಕಾಮಗಾರಿ ಸ್ಥಾಯಿ ಸಮಿತಿಯ

ದಿನಾಂಕ...21/11/2019..ನಿರ್ಣಯವನ್ನು

ಪುಟ ಸಂಖ್ಯೆ 36 37 ರಲ್ಲಿರುವಂತೆ ಮುಂದಿನ ಕ್ರಮಕ್ಕೆ ಸಲ್ಲಿಸಿದೆ.

24/11/19

ಕೌನ್ಸಿಲ್ ಕಾರ್ಯದರ್ಶಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

27) 27/11/19

28) ಮಾನ್ಯ ಆಯುಕ್ತರಿಗೆ ಶಿ.ಶಿ 27/11/19.

ಬೃ.ಬೆ.ಮ.ಪಾ. ಆಯುಕ್ತರ ಮುಖ್ಯ ಕಾರ್ಯಾಲಯ

ಸಂಖ್ಯೆ ಬಿ.ಎಸ್.ಕ್ಯೂ. ಕ್ಯೂ 517/19-20

ದಿನಾಂಕ 28/11/19

Commissioner 28/11/2019
Bruhat Bengaluru Mahanagara Palike

29) ಪರಿಶೀಲಿಸಿ ಆಯುಕ್ತರಿಗೆ ಸಲ್ಲಿಸಲಾಗಿದೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರು (ಯೋಜನೆ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪೂರ್ವ ವಲಯ

ಪ.ವಿ.ಎಂ.ಎ.

ದಿನಾಂಕ 29/11/19

(ವಲಯ)

CO/Yelahanka 30/11/19

6116

30/11/19